ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **381**

ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರಮೇಶ್ ಗೌಡ

ಉತ್ತರಿಸಬೇಕಾದ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ : 06-03-2020

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ವಾಹನ ಚಾಲನಾ ಪರವಾನಗಿ ನೀಡಲು ಅನುಸರಿಸುತ್ತಿರುವ ನಿಯಮಗಳೇನು:
(ವಿವರ ನೀಡುವುದು)</td><td>ವಾಹನ ಚಾಲನಾ ಪರವಾನಗಿ ನೀಡಲು ಅನುಸರಿಸುತ್ತಿರುವ ನಿಯಮಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.</td></tr>
<tr><td>ಆ</td><td>ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಿಂದ ನೀಡಲಾದ ದ್ವಿಚಕ್ರ ಮತ್ತು ನಾಲ್ಕು ಚಕ್ರ ವಾಹನ ಮತ್ತು ಭಾರಿ ವಾಹನಗಳ ಚಾಲನಾ ಪರವಾನಗಿಗಳು ಎಷ್ಟು:</td><td>ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ (01-04-2017 ರಿಂದ 29-02-2020 ರವರೆಗೆ) ನೀಡಲಾದ ದ್ವಿಚಕ್ರ, ನಾಲ್ಕು ಚಕ್ರ ಮತ್ತು ಭಾರಿ ವಾಹನಗಳ ಚಾಲನಾ ಪರವಾನಗಿಗಳ ವಿವರಗಳು ಕೆಳಕಂಡಂತಿವೆ.

<table>
<tr><th rowspan="2">ಜಿಲ್ಲೆಯ ಹೆಸರು</th><th colspan="3">ಚಾಲನಾ ಪರವಾನಗಿಗಳ ಸಂಖ್ಯೆ</th></tr>
<tr><th>ದ್ವಿಚಕ್ರ ವಾಹನ</th><th>ನಾಲ್ಕು ಚಕ್ರ ವಾಹನ</th><th>ಭಾರಿ ವಾಹನ</th></tr>
<tr><td>ಬೆಂಗಳೂರು ನಗರ</td><td>617823</td><td>522370</td><td>39008</td></tr>
<tr><td>ಬೆಂಗಳೂರು ಗ್ರಾಮಾಂತರ</td><td>72461</td><td>57888</td><td>5515</td></tr>
<tr><td>ಒಟ್ಟು</td><td>690284</td><td>580258</td><td>44523</td></tr>
</table></td></tr>
<tr><td>ಇ</td><td>ಚಾಲನಾ ಪರವಾನಗಿ ಕೋರಿ ಬಂದಿರುವ ಅರ್ಜಿಗಳೆಷ್ಟು:
ತಿರಸ್ಕರಿಸಿದ ಅರ್ಜಿಗಳೆಷ್ಟು:</td><td>ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಲ್ಲಿ (01-04-2017 ರಿಂದ 29-02-2020 ರವರೆಗೆ) ಚಾಲನಾ ಪರವಾನಗಿ ಕೋರಿ ಬಂದಿರುವ ಅರ್ಜಿಗಳು ಮತ್ತು ತಿರಸ್ಕರಿಸಿದ ಅರ್ಜಿಗಳ ವಿವರಗಳು ಕೆಳಕಂಡಂತಿವೆ.

<table>
<tr><th>ಜಿಲ್ಲೆಯ ಹೆಸರು</th><th>ಸ್ವೀಕರಿಸಿದ ಅರ್ಜಿಗಳ ಸಂಖ್ಯೆ</th><th>ತಿರಸ್ಕರಿಸಿದ ಅರ್ಜಿಗಳ ಸಂಖ್ಯೆ</th></tr>
<tr><td>ಬೆಂಗಳೂರು ನಗರ</td><td>1406400</td><td>754</td></tr>
<tr><td>ಬೆಂಗಳೂರು ಗ್ರಾಮಾಂತರ</td><td>105373</td><td>22</td></tr>
<tr><td>ಒಟ್ಟು</td><td>1511773</td><td>776</td></tr>
</table></td></tr>
</table>

ಟಿಡಿ 15 ಟಿಡಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು

: ಅನುಬಂಧ :

ಚಾಲನಾ ಪರವಾನಿಗೆ ಅರ್ಜಿ ಸಲ್ಲಿಸುವ ಮೊದಲು ಅರ್ಜಿದಾರರು ನಮೂನೆ-2 ರಲ್ಲಿ ಕಲಿಯುವವರ ಪರವಾನಿಗೆಗಾಗಿ ಬೇರೆ ಬೇರೆ ವರ್ಗದ ವಾಹನಗಳಿಗಾಗಿ ವಿವರಿಸಿ ಕೇ.ಮೋ.ವಾಹನ ನಿಯಮಗಳು 1989 ರ ನಿಯಮ 4 ರಲ್ಲಿ ವಿವರಿಸಿದ ವಿಳಾಸ ಮತ್ತು ವಯಸ್ಸಿನ ನಿಖರತೆಯ ಬಗ್ಗೆ ದಾಖಲೆಗಳನ್ನು ಸರ್ಕಾರ ಇತ್ತೀಚೆಗೆ ಒದಗಿಸಿದ ತಂತ್ರಾಂಶ https://parivahan.gov.in/sarathisevices ಅರ್ಜಿ ಸಲ್ಲಿಸಿ ಅಗತ್ಯ ಸ್ಲಾಟ್ ತೆಗೆದುಕೊಂಡು ಸಂಬಂಧಿಸಿದ ಸಾರಿಗೆ ಕಛೇರಿಯಲ್ಲಿ ನಿಗದಿತ ಶುಲ್ಕ ಪ್ರತಿ ವಾಹನ ವರ್ಗಕ್ಕೆ ರೂ.200/- ಪಾವತಿಸಿ ಸ್ಲಾಟ್ ದಿನಾಂಕದಂದು ಕಲಿಕಾ ಪರೀಕ್ಷೆಗೆ ಹಾಜರಾಗುವುದು. ಪರೀಕ್ಷೆಯಲ್ಲಿ ತೇರ್ಗಡೆಯ ನಂತರ ಆರು ತಿಂಗಳ ಅವಧಿಗೆ ಕಲಿಕಾ ಚಾಲನಾ ಪತ್ರ ನೀಡಲಾಗುವುದು.

ಕಲಿಕಾ ಚಾಲನಾ ಪತ್ರವನ್ನು ಪಡೆದ ಕನಿಷ್ಟ 30 ದಿನಗಳ ನಂತರ ಚಾಲನಾ ಪರವಾನಿಗೆ ಪಡೆಯಲು ಅಭ್ಯರ್ಥಿಯುಅರ್ಹನಾಗಿದ್ದು ಸಾರಥಿ-4ರ ತಂತ್ರಾಂಶ https://parivahan.gov.in/sarathisevices ದಲ್ಲಿ ಕೇ.ಮೋ.ವಾಹನ ನಿಯಮಗಳು 1989 ರ ನಿಯಮ 14 ರಲ್ಲಿ ವಿವರಿಸಿದಂತೆ ಅರ್ಜಿಯನ್ನು ಭರ್ತಿಗೊಳಿಸಿದ ಮೇಲೆ ಚಾಲನಾ ಅನುಜ್ಞಾ ಪತ್ರಕ್ಕಾಗಿ ದಿನಾಂಕ ಹೊಂದಿದ ಸ್ಲಾಟ್ ದೊರೆಯುತ್ತದೆ. ಅರ್ಜಿದಾರರು ಕಲಿಕಾ ಚಾಲನಾ ಪತ್ರ ಹೊಂದಿದ ವಾಹನದ ವರ್ಗಕ್ಕೆ ಅಗತ್ಯ ಶುಲ್ಕವನ್ನು online ಮೂಲಕವಾಗಲಿ ಇಲ್ಲವೆ ಸಂಬಂದಿಸಿದ ಪ್ರಾದೇಶಿಕ ಸಾರಿಗೆ ಕಛೇರಿಯ ಖಜಾನೆ ವಿಭಾಗದಲ್ಲಿ ಪಾವತಿಸುವುದು. ಮೂಲ ಕಲಿಕಾ ಚಾಲನಾ ಪತ್ರದೊಂದಿಗೆ ಚಾಲನಾ ಪರವಾನಿಗೆ ಬಯಸುವ ವಾಹನದ ವರ್ಗದ ದಾಖಲೆಗಳೊಂದಿಗೆ ಪರೀಕ್ಷೆಗೆ ಹಾಜರಾಗುವುದು. ಭಾರಿ ಸಾರಿಗೆ ವಾಹನಗಳ ವರ್ಗದ ಚಾಲನಾ ಪರವಾನಿಗೆಗೆ ಅರ್ಜಿ ಸಲ್ಲಿಸಿದಲ್ಲಿ ಚಾಲನಾ ತರಭೇತಿ ಶಾಲೆಯಲ್ಲಿ ತರಭೇತಿ ಹೊಂದಿದ ಪ್ರಮಾಣ ಪತ್ರದ ನಮೂನೆ-4 ರೊಂದಿಗೆ ಹಾಜರಾಗತಕ್ಕದ್ದು. ಸಂಬಂಧಿಸಿದ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿದ ನಂತರ ಸದರಿ ಅಭ್ಯರ್ಥಿಯ ಅರ್ಜಿಗೆ ಸರ್ಕಾರದ ಸಕಾಲ ಆದಲ್ಲಿ ಸಂಖ್ಯೆ ನೀಡಲಾಗುತ್ತದೆ. ತದನಂತರ ಅರ್ಜಿದಾರರು "ಬಯೋಮೆಟ್ರಿಕ್" ಜಾಗದಲ್ಲಿ ಭಾವಚಿತ್ರ/ಸಹಿ ನೀಡಿ ತದನಂತರ ಲಭ್ಯವಿದ್ದ ಕಛೇರಿಗಳ ಚಾಲನಾ ಪಥದಲ್ಲಿ ಪ್ರಾಯೋಗಿಕ ಪರೀಕ್ಷೆ/ ಕಾರ್ಯನಿರ್ವಾಹಕ ಸಿಬ್ಬಂದಿ ಸಮ್ಮುಖದಲ್ಲಿ ಪರೀಕ್ಷೆನೀಡುವುದು. ಸದರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ನಂತರ ಸಂಬಂಧಿಸಿದ ಕಾರ್ಯನಿರ್ವಾಹಕ ಸಿಬ್ಬಂದಿ ಅಭ್ಯರ್ಥಿಯ ತೇರ್ಗಡೆಯನ್ನು ತಂತ್ರಾಂಶದಲ್ಲಿ ದಾಖಲಿಸುವ ಮೂಲಕ ಮುಂದಿನ ಹಂತದ ಕಾರ್ಯಕ್ಕಾಗಿ ಸಂಬಂಧಿಸಿದ ಸಾರಿಗೆ ಅಧಿಕಾರಿಗಳಿಗೆ ಕಳುಹಿಸುವರು. ನಂತರ ಸಾರಿಗೆ ಅಧಿಕಾರಿಗಳು ಅದಕ್ಕೆ ಅನುಮೋದನೆ ನೀಡಿದ ನಂತರ ಅಭ್ಯರ್ಥಿಯ ಮೊಬೈಲ್ ಸಂಖ್ಯೆಗೆ ಮಾಹಿತಿ ದೊರೆಯುತ್ತದೆ. ಹಾಗೂ ಸಕಾಲ ಯೋಜನೆಯಡಿಯಲ್ಲಿ ನಿಗದಿಗೊಳಿಸಿದ ಅವಧಿ 21 ದಿವಸದೊಳಗೆ ಅಭ್ಯರ್ಥಿಯ ವಿಳಾಸಕ್ಕೆ ಸ್ಪೀಡ್‌ಪೋಸ್ಟ್ ಮೂಲಕ ಚಾಲನಾ ಅನುಜ್ಞಾ ಪತ್ರ ರವಾನೆಗೊಳಿಸಲಾಗುವುದು.

04/01

ಆಯುಕ್ತರು,
ಸಾರಿಗೆ ಮತ್ತು ರಸ್ತೆ ಸುರಕ್ಷತೆ,
ಬೆಂಗಳೂರು.